ಮೈಸೂರ ಗೆಜಿಟ.

ನಂ. 41 ಸರ್ಕಾರದಿಂದ ಫಾಯಿಷ್ ಆದ್ದು. ಸ್ಯ 1884.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ|| 11, ಸ್ಯ 1884.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್‌ಟಿಂಡೆಂಟರು, ಕಾಂಟ್ರೋಲರವರು, ಪಬ್ಲಿಕ ವರ್‌ಕ್ಸ್ ಆಫೀಸರ್‌ಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸಸೂಪರ್‌ಟೆಂಡೆಂಟರು, ಫಾರೆಸ್ಟ್ರು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮ್ಮ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇರ್ಷಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಮಸೂದಾ ಲ್ಯಾಂಡ್ ರೆವಿನ್ಯು ಕೋಡ್ ಕುರಿತ ಸೆಲೆಕ್ಟ್ ಕಮ್ಮಿಟಿಯವರ ರಿಪೋರ್ಟು.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 6ನೇ ಅಕ್ಟೋಬರ್ 1884.

ನಂ. 143.—ಹಾಸನ ತಾಲ್ಲೂಕು ಅಮಲ್‌ದಾರ್ ಖಾದರಲ್ಲೀಯವರಿಗೆ, 1884ನೇ ಇಸವಿ ಆಗಸ್ಟ್ 16ನೇ ಮತ್ತು 123ನೇ ನಂಬರುಳ್ಳ ಈ ಆಫೀಸ್ ಇಸ್ತಿಹಾರ್ ನಾಮೆಯಲ್ಲಿ ಕೊಡಲ್ಪಟ್ಟ ರಜಾಕ್ಕೆ ಜಾಸ್ತೀಯಾಗಿ ಬಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 144.—ಕ್ಲೋಸ್‌ಪೇಟೆ, ಮಾಗಡಿ ಮತ್ತು ಕಾನಖಾನಹಳ್ಳೀ ಈ ತಾಲ್ಲೂಕುಗಳ ಬಾರ್ಡುವುಳ್ಳ ಅಸಿಸ್ಟೆಂಟ್ ಕಮ್ಮಿಷನರ್ ವೆ|| ಅಬ್ದುಲ್ ಕರೀಮ್‌ಖಾನ್‌ರವರು, ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ 27ನೇ ಸೆಕ್ಷರ್ಷ (*a*) (1) ಕ್ಲಾಜ್ ಅನುಸರಿಸಿ ತಮ್ಮಲ್ಲಿ ಬಂದ ಭಟ್ಟಾದ್ ವಗೈರೇ ಮೊಕದ್ದಮೆಗಳನ್ನು ಅವರಿಗೆ ತಾಬೇದಾರ್‌ರಾದ ಮಾಜಿಸ್ಟ್ರೇಟರಿಗೆ ಕಳುಹಿಸುವದಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ. (ಸೆಕ್ಷರ್ಷ 44.)

ನಂ. 145.—ಹಾಸನದ ಸಬ್ ಡಿವೀಜ್ಯ ಆಫೀಸರ್ ಮೆ॥ ಟಿ. ಆನಂದರಾಯರು, ಮಾಹೆ ಮಜಕೂರ್ 5ನೇ ಮರ್ಕುಂ ಲಾಗಾಯತು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಅಫಿಷಿಯೇಟಿಂಗ್ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಎಸ್. ಕೃಷ್ಣರಾಯರು, ಮೆ॥ ಆನಂದರಾಯರು ರಜಾದ ಮೆಲ್ನೀರುನಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಹಾಸನ ಸಬ್ ಡಿವೀಜ್ಯ ಚಾರ್ಜನ್ನು ವಹಿಸಿರತಕ್ಕದ್ದು.

ತಾರೀಖು 22ನೇ ಸೆಪ್ಟಂಬರ್ 1884.

ನಂ. 140.—ಸಾಲ್ ಮಜಕೂರು ಆಗಸ್ಟು 30ನೇ ಮರ್ಕುಮಿನ ಮೈಸೂರ ಗೆಜೆಟ್ 223ನೇ ಪುಟದಲ್ಲಿ ಛಾಪಿಸಲ್ಪಟ್ಟ ಅದೇ ಮಾಹೆ 21ನೇ ಮರ್ಕುಂ 126ನೇ ನಂಬರ್ ಇಸ್ತಿಹಾರ್ ನಾಮೆಯನ್ನು ಬದಲಾಯಿಸಿ ಇದರಡೀ ಕಾಣಿಸಿರುವ ತಖ್ತೆಯು ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುತ್ತೆ:—

ಮಾಗಣಿ ಹೆಸರು.	ನಂಬರು.	ಕಾಯಂಮಾಡಲ್ಪಡಬೇಕಾದ ಗ್ರಾಮಗಳು.	ನಂಬರು.	ಮೂರನೇ ಕಾಲಂನಲ್ಲಿ ಕಾಣಿಸಿರುವ ಗ್ರಾಮಗಳಲ್ಲಿ ಸೇರಿಸಬೇಕಾದ ಗ್ರಾಮಗಳು.	ಪರಾ.
1	2	3	4	5	6
		ಹಾಸನ ತಾಲ್ಲೂಕು.			
ಹೊನ್ನಾವರ	1	ರಾಮನಹಳ್ಳಿ ..	1	ಗುಡಬೊಮ್ಮನಹಳ್ಳಿ	
	2	ಭಕ್ತರವಳ್ಳಿ (ಮೂರವೇ ಫರಕಾ) ..	1	ಮಾಯಿಗೊಂಡನಹಳ್ಳಿ	
	3	ಕೊಡಗತವಳ್ಳಿ	..	..	ಭರತೂರಿಗೆ ಸೇರಿದ ಈ ಎರಡು ದಾಖಲೆ ಗ್ರಾಮಗಳೂ ನೂಲೆತಾಕಾಗಿರುವದರಿಂದ ಈ ಎರಡೂ ಬೇರೇ ಗ್ರಾಮಗಳಾಗಿರತಕ್ಕದ್ದು, ಆಸಲೀ ಭರತೂರಿಗೆ ಸೇರತಕ್ಕದ್ದಲ್ಲಾ.
	4	ಕಟ್ಟೇಹೊಸೂರು			
	5	ಹಂಗಲಿಗೆ ..	1	ಮೂಲಗೊಂಡನಹಳ್ಳಿ	
	6	ಮೂಡಿಹಳ್ಳಿ	1	ಭಕ್ತರವಳ್ಳಿ (ಬೇಚರಾಖ)	
			2	ಹುಲಕುಂದ	
	7	ಚಿಕ್ಕನಹಳ್ಳಿ ..	1	ಬುಕ್ಕಾಪುರ	
	8	ಅಮಲೇಪುರ ..	1	ಮಲ್ಲೇನಹಳ್ಳಿ	
ಪಾಳ್ಯ	9	ವಲ್ಗರಹಳ್ಳಿ ..	2	ಪಾಯಿಂಣನಹಳ್ಳಿ	
ಕಾಟ್ಯ	10	ದೇನಿಹಳ್ಳಿ ..	1	ಮೂಡ್ಲಚಿಕ್ಕನಹಳ್ಳಿ	
	11	ಮಂಚನಹಳ್ಳಿ ..	1	ಪಡ್ಲುಚಿಕ್ಕನಹಳ್ಳಿ	

ಬವೋಜೇಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಸೆಕ್ರಟೇರಿ.